ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

3
ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 22/1/21

## ಸಂಸತ್ ಕಾರ್ಯದರ್ಶಿಯಿಂದ ಸ್ಪಷ್ಟನೆ ಕೋರಿಕೆ

**ಬೆಂಗಳೂರು:** ಬಿಜೆಪಿ ಮತ್ತೊಮ್ಮೆ ವಿಧಾನಪರಿಷತ್ ಸಭಾಪತಿ ವಿರುದ್ಧ ಸಲ್ಲಿಸಿರುವ ಅವಿಶ್ವಾಸಕ್ಕೆ ಸಂಬಂಧಿಸಿದಂತೆ ಸಂಸತ್‌ನ ಮಹಾ ಪ್ರಧಾನ ಕಾರ್ಯದರ್ಶಿ ಅವರಿಂದ ಸ್ಪಷ್ಟನೆ ಕೋರಲು ನಿರ್ಧರಿಸಲಾಗಿದೆ. ಕಳೆದ ಅಧಿವೇಶನದಲ್ಲಿ ಸಭಾಪತಿ ವಿರುದ್ಧ ಅವಿಶ್ವಾಸ ಪ್ರಸ್ತಾಪ ಚರ್ಚೆಗೆ ಬರದೆ ಗದ್ದಲದಲ್ಲಿಯೇ ಸದನವನ್ನು ಮುಂದೂಡಲಾಗಿತ್ತು. ಇದೀಗ ಜ.28ರಿಂದ ಅಧಿವೇಶನ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿ ಎರಡು ಅವಿಶ್ವಾಸ ಪ್ರಸ್ತಾಪಗಳನ್ನು ಪರಿಷತ್ ಕಾರ್ಯದರ್ಶಿಗೆ ಸಲ್ಲಿಸಿದೆ. ಅವಿಶ್ವಾಸ ನಿರ್ಣಯವನ್ನು 14 ದಿನ ಮೊದಲು ಸಲ್ಲಿಸಬೇಕೆಂಬ ನಿಯಮವಿದೆ. ಆದರೆ, ಈ 14 ದಿನ ಆರಂಭವಾಗುವುದು ಯಾವಾಗ ಎಂಬ ಪ್ರಶ್ನೆ ಎದುರಾಗಿದೆ. ಅಧಿವೇಶನ ಆರಂಭಕ್ಕಿಂತ ಮೊದಲೋ ಅಥವಾ ರಾಜ್ಯಪಾಲರು ಅಧಿವೇಶನ ಹೊರಡಿಸಿದ ನಂತರ ಪರಿಗಣಿಸಬೇಕೋ ಎಂಬ ಬಗ್ಗೆ ಗೊಂದಲಗಳಿದ್ದು, ಸಂಸತ್‌ನ ಮಹಾಪ್ರಧಾನ ಕಾರ್ಯದರ್ಶಿಯಿಂದ ಸ್ಪಷ್ಟನೆ ಕೋರಲಾಗುತ್ತಿದೆ.

**ಸಭಾಪತಿ ವಿರುದ್ಧ ಅವಿಶ್ವಾಸ**

**ರಾಜೀನಾಮೆ?:** ಸಭಾಪತಿ ಅಥವಾ ಉಪ ಸಭಾಪತಿ ರಾಜೀನಾಮೆ ನೀಡುವುದಾದರೆ ಅದನ್ನು ಇನ್ನೊಬ್ಬರ ಕೈಗೆ ಮಾತ್ರ ನೀಡಬೇಕು. ಆದ್ದರಿಂದ ಜ.29ರಂದು ಉಪ ಸಭಾಪತಿ ಚುನಾವಣೆ ನಂತರ ಪ್ರತಾಪಚಂದ್ರ ಶೆಟ್ಟಿ ರಾಜೀನಾಮೆಯನ್ನು ಉಪ ಸಭಾಪತಿ ಕೈಗೆ ಕೊಡಲು ನಿರ್ಧರಿಸಿದ್ದಾರೆನ್ನಲಾಗಿದೆ.